

ಮಣ್ಣಿನ ಕೊಡ. ಅವಳದನ್ನು ಎಚ್ಚರಿಕೆಯಿಂದ ಮಡಿಸಿ, ಬಿಳಿಯ ಹತ್ತಿ ಚೀಲದಲ್ಲಿಟ್ಟಳು. ಅದನ್ನು ಅಚ್ಚ ನೀಲಿ ಬಣ್ಣದ ರೇಶ್ಮೆ ಚೀಲದಲ್ಲಿಟ್ಟು, ಅದಕ್ಕೆ ಕೆಂಪು ಬಣ್ಣದ ಕುಚ್ಚು ಕಟ್ಟಿ ತಂದೆಯ ಜೊತೆಯಲ್ಲಿ ಮಹಾರಾಣಿಗೆ ತಲುಪಿಸಲೆಂದು ಹೊರಟಳು. ಈ ಸಲ ಅವಳ ರಾಜ ಮಹಲಿನ ಭೇಟಿ ವಿಶೇಷ ಎಂದು ಅವಳಿಗೆ ಅನ್ನಿಸಲಿಲ್ಲ. ಮೊದಲ ಸಲದಲ್ಲಿದ್ದ ರೋಮಾಂಚನ ಅವಳಲ್ಲಿರಲಿಲ್ಲ. ಆದರೆ ಮಹಾರಾಣಿ ಅಂಬಿಕಾದೇವಿ ಅವಳೊಬ್ಬಳನ್ನೇ ಒಳಗೆ ಬರಲು ಸೂಚನೆ ನೀಡಿದಳು. ಅಂಜು ತಾನು ತೆಗೆದುಕೊಂಡು ಹೋದ ಚೀಲವನ್ನು ಹರಿವಾಣದಲ್ಲಿಟ್ಟು ದಾಸಿಯ ಕೈಯಲ್ಲಿ ಕೊಟ್ಟಳು. ದಾಸಿ ಅದನ್ನು ಬಿಡಿಸಿ ರಾಣಿಗೆ ತೋರಿಸಿದಳು. ಅದನ್ನು ಕೂಲಂಕಶವಾಗಿ ನೋಡಿದ ರಾಣಿ, ಒಮ್ಮೆ ಅಂಜುವನ್ನು ನೋಡಿದಳು. ಕುದುರೆ ಮತ್ತು ಮಣ್ಣಿನ ಕೊಡ ಅವಳಿಗೆ ಕತೆ ಹೇಳಿತು. ದಾಸಿಯನ್ನು ಹೊರಗೆ ಕಳಿಸಿದ ರಾಣಿ, ಅಂಜುವಿಗೆ ಕುಳಿತುಕೊಳ್ಳಲು ಹೇಳಿದಳು. ಅಂಜು ಅಲ್ಲೆ ನೆಲದ ಮೇಲೆ ಕುಳಿತಾಗ ರಾಣಿ ಹೇಳಿದಳು... 'ಅಂಜು... ನೀನಿನ್ನೂ ಚಿಕ್ಕವಳು. ನೀನು ತಿಳಿಯಬೇಕಾದ ವಿಷಯ ಬಹಳವಿದೆ. ನಿನ್ನ ಮತ್ತು ರಾಜಕುವರನ ನಡುವೆ ಇರುವ ಸ್ನೇಹ ನನಗೆ ಎಂದೋ ತಿಳಿದಿದೆ...' ಧ್ವನಿ ಗಂಭೀರವಾಗಿತ್ತು.

ಅಂಜು ಸಣ್ಣಗೆ ನಡುಗಿದಳು. 'ಹೆದರಬೇಡ. ಅವತ್ತೇ ಹೇಳಿದ್ದೇನೆ... ನೀನು ಅಂಜಬಾರದು.' ಅಂಜು ತಲೆಯೆತ್ತಿ ರಾಣಿಯನ್ನು ನೋಡಿದಳು. 'ನಿನ್ನನ್ನು ಹೆದರಿಸಲು ಕರೆಸಿಲ್ಲ' ರಾಣಿ ಹೇಳಿದಳು 'ನಿನಗೆ ಗೊತ್ತಾ... ರಾಣಿವಾಸದ ಹೆಂಗಸರು ನಾವು... ಗಂಡನನ್ನು ಹಂಚಿಕೊಳ್ಳಲು ಕಲಿತುಬಿಡುತ್ತೇವೆ' ದೃಢವಾಗಿತ್ತು ಅವಳ ಧ್ವನಿ. 'ಆದರೆ, ನೀನು ಬಂಜಾರ ಗುಂಪಿನ ಮುಗ್ಧ ಹುಡುಗಿ. ನಿನಗೆ ಗಂಡ ಸರ್ವಸ್ವವೂ ಆಗಿರುತ್ತಾನೆ. ನಿನಗೆ ಗಂಡ ಪ್ರಿಯಕರ... ಬೆಳದಿಂಗಳಲ್ಲಿ ತುತ್ತು ತಿನ್ನಿಸುವ ಆರಾಧಕ, ನಿನ್ನ ಹಾಡಿಗೆ ಹೆಜ್ಜೆ ಹಾಕುವ ನರ್ತಕ... ನಿನ್ನ ಅಡುಗೆಯ ಪ್ರತಿಯೊಂದು ಅಂಶವನ್ನೂ ವಿವರಿಸುವ ಮತ್ತು ನಿನ್ನಲ್ಲಿ ಮಾತ್ರ ವಿಹರಿಸುವ ಜನ್ಮಸೇವಕ...' ಅವಳ ಧ್ವನಿಯಲ್ಲಿ ನೋವಿತ್ತು. 'ಆದರೆ, ನಮ್ಮ ರಾಣಿವಾಸದ ಪಾಠಗಳೇ ಬೇರೆ... ಗಂಡ ಎಷ್ಟೇ ವಿವಾಹವಾಗಲಿ, ವರುಷ ಎರಡು ವರುಷಕ್ಕೊಂದು ಸಲ ಬಂದು ನಮ್ಮನ್ನು ನೋಡಿದರೆ ಸಾಕು... ನಾವು ಅಷ್ಟರಲ್ಲಿಯೇ ಪುನೀತರಾಗಿಬಿಡುತ್ತೇವೆ. ನಮಗೆ ರಾಜಧರ್ಮವೇ ಮುಖ್ಯ. ಪತಿಯ ಪ್ರತಿಯೊಂದು ನಡೆಯೂ ರಾಜ್ಯ ಕಾರಣಕ್ಕೆ, ಪ್ರಜೆಗಳಿಗೆ ಮಾತ್ರ ಸೀಮಿತವಾಗಿರಬೇಕೇ ಹೊರತು ರಾಣಿವಾಸಕ್ಕಲ್ಲ. ಒಂದುವೇಳೆ ಅವನು ಸೋತರೆ ರಾಜ್ಯವನ್ನಾಳುವ ಸಕಲ ಕಲೆಯೂ ನಮ್ಮಲ್ಲಿರುತ್ತದೆ. ರಾಜ್ಯಕ್ಕಾಗಿ ಪ್ರಾಣವನ್ನೇ ಪಣವನ್ನಾಗಿ ಇಡುವುದನ್ನು ನಾವು ಪಾಠವಾಗಿಯೇ ಸ್ವೀಕರಿಸಿರುತ್ತೇವೆ. ಪತಿ ಇಲ್ಲವೆಂದರೂ ನಮಗೆ ಪ್ರಜೆಗಳನ್ನು ಕಾಯುವ ಹೊಣೆಗಾರಿಕೆ ಇರುತ್ತದೆ.' ರಾಣಿಯ ಧ್ವನಿಯಲ್ಲಿ ಅತಿಯಾದ ಗಾಂಭೀರ್ಯವಿತ್ತು.

'ಹೇಳು ಅಂಜು... ನಿನಗೆ ಹೀಗೆ ಬಾಳಲು ಸಾಧ್ಯವೇ?... ಕಾಡಿನಲ್ಲಿ ಕಟ್ಟಿಗೆ ಹೊತ್ತು, ನವಿಲಿನ ಜೊತೆ ಆಡುತ್ತ, ಜಿಂಕೆಯ ಜೊತೆ ಹೆಜ್ಜೆ ಹಾಕುವ ನೀನು... ರಾಣಿವಾಸಕ್ಕೆ ಬಂದು ಬಾಳುತ್ತೀಯಾ?... ನೀನು ಹೂಂ ಎಂದರೆ ನಾನು ಈ ಕ್ಷಣದಿಂದಲೇ ನಿನಗೆ ತರಬೇತಿ ನೀಡಲು ಆರಂಭಿಸುತ್ತೇನೆ. ಹೇಳು ಸಿದ್ಧವಿರುವೆಯಾ?' ಧ್ವನಿ ಕಾಠಿಣ್ಯ ಪಡೆದಿತ್ತು. 'ಹೇಳು... ಕಾಡು ಬಿಟ್ಟು ಕತ್ತಿಯ ಮೇಲೆ ನಡೆಯಲು ಸಿದ್ಧಳಿದ್ದೀಯಾ?'

ಅಂಜು ನಡುಗಿ ಹೋದಳು. ರಾಣಿ ಹೇಳಿದಂತೆ ಅವಳ ಜಗತ್ತಿನಲ್ಲಿ ಕೇವಲ ನದಿ, ಆಕಾಶ, ನಕ್ಷತ್ರಗಳನ್ನು ಬಿಟ್ಟರೆ ಬೇರೇನೂ ಇಲ್ಲ. ಅವಳು ಹಾಡುತ್ತಿದ್ದ ಹಾಡುಗಳು, ಕಲಿಯುತ್ತಿದ್ದ ಪಾಠಗಳು ಕೂಡ ಅಂಥವೇ ಆಗಿದ್ದವು. ಎಲ್ಲವೂ ಶಾಂತ, ನಿರ್ಮಲ. ಯುದ್ಧ, ರಾಜಕೀಯ ಅವಳ ಮನಸ್ಸಿನಲ್ಲಿ ಎಂದೂ ಸ್ಥಾನ ಪಡೆದಿರಲಿಲ್ಲ. ಈಗ ತಣ್ಣಗಾಗಿಬಿಟ್ಟಳು. ಮಾತೇ ಹೊರಡಲಿಲ್ಲ. ರಾಜ ವೈಭವವನ್ನು ಹೊರಗಿನಿಂದ ನೋಡಿ ಮಾತ್ರ ಗೊತ್ತು. ಆದರೆ ಒಳಗೆ ಇಂತಹುದೊಂದು ನಿರಂತರ ಹೋರಾಟ